ಎಮ್ ವಿ ಸಿ **1228-2025**

ದಿನಾಂಕಃ25.02.2026  ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ **2** ನೇ ಎದುರುದಾರರ ಪರಃ

ಅಪಘಾತ ಸಮಯದಲ್ಲಿ ನಾನು ಆಟೋರಿಕ್ಷಾವನ್ನು ಸಂಪ್ಯದಿಂದ ಪುತ್ತೂರು ಕಡೆಗೆ ಚಲಾಯಿಸುತ್ತಿದ್ದೆ. ಕಾರು ಮುಕ್ರಂಪಾಡಿಯ ಒಳರಸ್ತೆಯಿಂದ ಬರುತ್ತಿತ್ತು. ಸುಮಾರು **15-20** ಮೀಟರ್ ದೂರದಿಂದ ನಾನು ಕಾರನ್ನು ನೋಡಿದ್ದೇನೆ. ಕಾರು ಮುಖ್ಯ ರಸ್ತೆಗೆ ಬಂದು ಕುಂಬ್ರ ಕಡೆಗೆ ಹೋಗಿರುತ್ತದೆ. ನಾನು ವೇಗವಾಗಿ ರಿಕ್ಷಾವನ್ನು ಚಲಾಯಿಸಿದ ಕಾರಣ ವಾಹನದ ಕಂಟ್ರೋಲ್ ತಪ್ಪಿ ಅಪಘಾತ ಆಗಿದೆ ಎಂದರೆ ಸುಳ್ಳು. ನನ್ನ ತಪ್ಪಿನಿಂದಲೇ ಅಪಘಾತವಾಗಿದ್ದು ಕಾರಿನ ಚಾಲಕನ ತಪ್ಪಿನಿಂದ ಅಪಘಾತ ಆಗಿಲ್ಲ ಎಂದರೆ ಸುಳ್ಳು.

ಅಪಘಾತವಾದ ನಂತರ ನಾನು ಮಹಾವೀರ ಆಸ್ಪತ್ರೆಯಲ್ಲಿ ಒಳರೋಗಿಯಾಗಿ **3** ದಿನ ಚಿಕಿತ್ಸೆ ಪಡೆದಿದ್ದೇನೆ. ಗಾಯದ ಪ್ರ.ಪತ್ರದಲ್ಲಿ ನಮೂದಿಸಿರುವಂತಹ ಗಾಯಗಳು ನನಗೆ ಆಗಿಲ್ಲ ಎಂದರೆ ಸುಳ್ಳು. ನನ್ನ ವಾಕ್ಯ ಪ್ರ.ಪತ್ರದಲ್ಲಿ ಹೇಳಿರುವಷ್ಟು ಖರ್ಚು ಚಿಕಿತ್ಸೆಗಾಗಿ ನನಗೆ ತಗುಲಿಲ್ಲ ಎಂದರೆ ಸುಳ್ಳು. ನಾನು ಸಲ್ಲಿಸಿರುವ ಅಂಗನ್ಯೂನ್ಯತಾ ಪ್ರ ಪತ್ರದಲ್ಲಿ ಸೂಚಿಸಿರುವಷ್ಟು ಅಂಗನ್ಯೂನ್ಯತೆ ನನಗೆ ಆಗಿಲ್ಲ ಆದರೂ ಕೂಡಾ ವೈದ್ಯರ ಮೇಲೆ ಪ್ರಭಾವ ಬೀರಿ ಸೃಷ್ಟಿತ ಅಂಗನ್ಯೂನ್ಯತಾ ಪ್ರ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಬೇಕು ಎನ್ನುವ ದುರುದ್ದೇಶದಿಂದ ಅಂಗುನ್ಯಾನ್ಯತಾ ಪ್ರ ಪತ್ರವನ್ನು ಪಡೆಯಲಾಗಿದೆ ಎಂದರೆ ಸುಳ್ಳು.

ನಾನು ಹಾಜರುಪಡಿಸಿರುವ ವೇತನ ಪ್ರ ಪತ್ರ ಸುಳ್ಳಿನಿಂದ ಕೂಡಿದ್ದು ಅದರಲ್ಲಿ ನಮೂದಿಸಿರುವಷ್ಟು ಆಧಾಯ ನನಗೆ ಇರಲಿಲ್ಲ ಎಂದರೆ ಸರಿಯಲಲ್ಲ. ನಾನು ಈಗಲೂ ಕೂಡಾ ರಿಕ್ಷಾ ಚಲಾಯಿಸುತ್ತೇನೆ ಎಂದರೆ ಸರಿಯಲ್ಲ. ನನಗೆ ರಿಕ್ಷಾ ಚಲಾಯಿಸಲು ಆಗುವುದಿಲ್ಲವಾದ ಕಾರಣ ನನಗೆ ನೀಡಿದ ಲೈಸನ್ಸ್ ನ್ನು ಆರ್ ಟಿ ಒ ರವರಿಗೆ ವಾಪಸ್ಸು ನೀಡಿ ರದ್ದುಪಡಿಸಿಕೊಂಡಿದ್ದೀರಾ ಎಂದರೆ ಇಲ್ಲ. ಅಪಘಾತ ಪೂರ್ವ ಏನು ಕೆಲಸ ಮಾಡುತ್ತಿದ್ದೆನೋ ಅದನ್ನೇ ಈಗಲೂ ಕೂಡಾ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವೃತ್ತಿಯಲ್ಲಿ ರಿಕ್ಷಾ ಚಾಲಕನಲ್ಲ ಮೇಸ್ತ್ರಿ ಕೆಲಸವನ್ನೂ ಕೂಡಾ ವಾಡುವುದಿಲ್ಲ ವತ್ತು ನನಗೆ ತಿಂಗಳಿಗೆ **45** ಸಾವಿರ ವರಮಾನ ಕೂಡಾ ಇಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲಾತಿ ಸೃಷ್ಟಿಸಿ ಹಾಜರುಪಡಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **1** ನೇ ಎದುರುದಾರರ ಪರ ವಕೀಲರಿಂದಃ</u>

1 ಎದುರುದಾರರ ಪರ ವಕೀಲರು 2 ನೇ ಎದುರುದಾರರ ಪರ ವಕೀಲರು ನಡೆಸಿದ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು